### ಹೆಣ್ಣಿನ ನೋವು

ಆಗಸ್ಟ್ 15ರ ಸಂಚಿಕೆಯಲ್ಲಿ 'ಶೇಕ್ಸ್‌ಪಿಯರ್‌ನಿಗೊಬ್ಬಳು ಪ್ರತಿಭಾವಂತ ತಂಗಿ ಇದ್ದಿದ್ದರೆ' (ಕಾವ್ಯ ಕಡಮೆ ನಾಗರಕಟ್ಟೆ) ಎನ್ನುವ ಕಲ್ಪನೆ ಚೆನ್ನಾಗಿದೆ. ಹೆಣ್ಣಿನ ಸ್ಥಿತಿಗತಿಗಳು ಭಾರತ–ಅಮೆರಿಕಗಳಲ್ಲಿ ಬಹಳಷ್ಟು ವ್ಯತ್ಯಾಸವಿರದು ಎನ್ನುವ ಅಂಶಗಳು ದಿಗ್ಭ್ರಮೆ ಮೂಡಿಸಿದವು.

—ಎಚ್. ಆನಂದ್‌ಕುಮಾರ್, ಚಿತ್ರದುರ್ಗ

### ಬಾಲ್ಯವ ನೆನಪಿಸಿದ ಬರಹ

ಆಗಸ್ಟ್ 8ರ ಸಂಚಿಕೆಯಲ್ಲಿ ಮಾಸ್ತಿಯವರು ಬರೆದ 'ಸಣ್ಣ ಮಕ್ಕಳ ಅಡ್ಜಸ್ಟ್‌ಮೆಂಟುಗಳು' ಲೇಖನ ಓದಿದಾಗ ಕಣ್ಣುಗಳು ಮಂಜಾದವು. ಅವರು ನಮ್ಮ ಬಾಲ್ಯ ಜೀವನವನ್ನು ಯಥಾವತ್ತಾಗಿ ಬರೆದಿದ್ದಾರೆ. ಒಂದು ಜಮಖಾನೆಯಲ್ಲಿ ಆಗಿನ ಕಾಲದ ಕೌದಿಯಲ್ಲಿ ಐದು ಜನರು ಮಲಗುತ್ತಿದ್ದುದು ನೆನಪಾಯಿತು. ಅವರ ಪೂರ್ತಿ ಲೇಖನ ನನ್ನ ಜೀವನದಲ್ಲಿ 100% ಹೋಲುತ್ತದೆ.

—ಸುಭಾಸ ಟಿ. ಕೋಟಿ, ಗಜೇಂದ್ರಗಡ

### ಶ್ರಾವಣ ಸಂಜೀವಿನಿ

ಆಗಸ್ಟ್ 8ರ ಸಂಚಿಕೆಯಲ್ಲಿನ 'ಶ್ರಾವಣ ಸಂಜೀವಿನಿ' ಲೇಖನ ಕಾವ್ಯದ ಸೊಬಗಿನ ಮೂಲಕ ಶ್ರಾವಣ ಮಾಸದ ಚೆಲುವನ್ನು, ಆ ಮಾಸದ ಹಬ್ಬಗಳ ಸೊಗಡನ್ನು, ಸುಂದರ ಮುಖಪುಟದೊಡನೆ ಕಣ್ಣಿಗೆ ಕಟ್ಟಿಕೊಟ್ಟಿದೆ.

—ಡಾ. ಕೆ.ಎಸ್. ಚಂದ್ರಶೇಖರ್ ಮೈಸೂರು,
ಎಸ್. ಚನ್ನಪ್ಪ, ಮೈಸೂರು

### ರಾಜಕಲಾವಿದನ ವೃತ್ತಾಂತ

'ಸುಧಾ' ಕೈಗೆ ಸಿಕ್ಕ ತಕ್ಷಣ 'ರಾಜ ಕಲಾವಿದ' ಧಾರಾವಾಹಿ ಓದುವೆ. ನಾನೋರ್ವ ಚಿತ್ರಕಲಾ ಶಿಕ್ಷಕನಾಗಿರುವುದರಿಂದ ರಾಜಾ ರವಿವರ್ಮರ ಬಗ್ಗೆ ಅಲ್ಲಲ್ಲಿ ಓದಿದ್ದೆ, ಕೇಳಿದ್ದೆ. ಸಹಜವಾಗಿ ರವಿವರ್ಮರ ಬಗ್ಗೆ ಒಂದು ಕುತೂಹಲವಿತ್ತು. ಆ ಕಾರಣಕ್ಕಾಗಿ ಧಾರಾವಾಹಿಯ ಮೊದಲ ಭಾಗ ಓದಿದೆ. ಪ್ರತಿವಾರ ಮುಂದಿನ ಭಾಗ ಓದುವುದಕ್ಕೆ ಮನಸ್ಸು ಕಾತರಿಸುವಂತೆ ಬರೆಯುತ್ತಿದ್ದಾರೆ. ಧಾರಾವಾಹಿ ಪೂರ್ಣಗೊಂಡ ಮೇಲೆ, ರಾಜ ಕಲಾವಿದರ ಬದುಕು ಬರಹ, ದೇವರ ಚಿತ್ರಪಟಗಳ ಹಿಂದಿನ ಕಟುಸತ್ಯ, ಸಂಪ್ರದಾಯ, ಮೌಢ್ಯ ಈ ಎಲ್ಲವುಗಳ ಕುರಿತು ನಮ್ಮ ಮಕ್ಕಳಿಗೆ ತಿಳಿಹೇಳುವ ತವಕಲ್ಲಿರುವೆ. ಲೇಖಕಿ ಗೀತಾ ಸೀತಾರಾಮ್ ಅವರಿಗೆ ಧನ್ಯವಾದ.

—ಕೆ.ಬಿ. ವೀರಲಿಂಗನಗೌಡ್ರ, ಸಿದ್ದಾಪುರ

### ಕಾಶ್ಮೀರ ಭಾವಸರೋವರ

ಅನೇಕ ಅನುಸಂಧಾನಗಳ ರೋಚಕ ನೆಲೆಯ ಕಾಶ್ಮೀರ ಲೇಖನದ ಒಳಹೊಕ್ಕಾಗ ಆಗುವ ಅನುಭವ ಅನನ್ಯ. ಪ್ರತ್ಯಕ್ಷವಾಗಿ ನೋಡಬೇಕೆಂಬ ಹಂಬಲ ಎಂಥವರನ್ನು ಕಾಡುತ್ತದೆ. ಸಂಗ್ರಾಹ್ಯಯೋಗ್ಯ ಸಂಚಿಕೆ ಇದು. ಇಂಥ ಸುಂದರ ತಾಣ ರಣರಂಗವಾಗಿದ್ದು ನೋವಿನ ಸಂಗತಿ.

—ಮೈ. ಸತೀಶ ಕಮಾರ, ಬಂಗಾರಪೇಟೆ

## ಮಂದಿಯಲ್ಲಿ ಒಂದಾಗದ ಸಂಚಿಕೆ




ಇಡೀ ಮುದ್ರಣ–ವಿದ್ಯುನ್ಮಾನ ಮಾಧ್ಯಮ ಒಂದು ಬಗೆಯ ಉನ್ಮಾದದಲ್ಲೆಂಬಂತೆ ದೇಶದ/ಸರಕಾರದ ಸಾಧನೆಗಳನ್ನು ಕೂಗಿ ಕೂಗಿ ಸಾರುತ್ತಿರುವಾಗ, 'ಸುಧಾ' ಬಳಗ ಸ್ವಾತಂತ್ರ್ಯ ದಿನಾಚರಣೆಯ ಸಂಚಿಕೆಯನ್ನು ವಿಭಿನ್ನವಾಗಿ ರೂಪಿಸಿದೆ. 'ಯಾರಿಗೆ ಬಂತು ಸ್ವಾತಂತ್ರ್ಯ?' ಎಂಬ ಪ್ರಶ್ನೆಯನ್ನು ಎತ್ತಿಕೊಂಡು ವಿಲ್ಸನ್ ಕಟೀಲ್, ಕಾವ್ಯಾ ಕಡಮೆ ಮತ್ತು ರೂಪ ಹಾಸನ ಇವರುಗಳಿಂದ ತುಂಬಾ ಅರ್ಥಪೂರ್ಣ ಹಾಗೂ ಪ್ರಸ್ತುತ ಲೇಖನಗಳನ್ನು ಒಂದೆಡೆ ತಂದಿದ್ದೀರಿ; ಆ ಮೂಲಕ, ಯಾರಿಗೆ ಸ್ವಾತಂತ್ರ್ಯ ಬಂದಿದ್ದರೂ ಬಡ ಸ್ತ್ರೀಯರಿಗೆ, ಹೆಣ್ಣುಮಕ್ಕಳಿಗೆ, ಜನಸಾಮಾನ್ಯರಿಗೆ ಯಾವ ಸ್ವಾತಂತ್ರ್ಯವೂ ಬಂದಿಲ್ಲ ಎಂಬುದನ್ನು ಈ ಲೇಖನಗಳ ಮೂಲಕ ದಾಖಲಿಸಿದ್ದೀರಿ. ಮಂದಿಯೊಳಗೆ ಒಂದಾಗದೆ, 'ಶೇಕಡಾ ಏಳರ ಖಳರ' (ಗೋಪಾಲಕೃಷ್ಣ ಅಡಿಗರು ಹೇಳುವಂತೆ) ಸಣ್ಣ ಗುಂಪಿನಲ್ಲಿದ್ದೀರಿ. ತುಂಬಾ ಸಂತೋಷವಾಯಿತು. ಹಾರ್ದಿಕ ಅಭಿನಂದನೆಗಳು ಹಾಗೂ ಓದುಗರ ನೆಲೆಯಲ್ಲಿ ಧನ್ಯವಾದಗಳು.

—ಸಿ.ಎನ್. ರಾಮಚಂದ್ರನ್, ಬೆಂಗಳೂರು

### ರಾಷ್ಟ್ರಧ್ವಜದ ಊರು

ಆಗಸ್ಟ್ 22 ರ ಸಂಚಿಕೆಯಲ್ಲಿ, ನಮ್ಮ ದೇಶದ ಗೌರವದ ಪ್ರತೀಕವಾದ ರಾಷ್ಟ್ರಧ್ವಜವು ಧಾರವಾಡ ಜಿಲ್ಲೆಯ ಬೆಂಗೇರಿ ಹಾಗೂ ಗರಗ ಗ್ರಾಮದಲ್ಲಿ ಆರು ಹಂತಗಳಲ್ಲಿ ಹೇಗೆ ರೂಪುಗೊಳ್ಳುತ್ತದೆ ಎಂಬುದನ್ನು ಪರಿಚಯಿಸಿದ ಆಜಾದ್/ಸುಧೀಂದ್ರ ಅವರಿಗೊಂದು ಸಲಾಂ.

—ಪಿ. ಜಯವಂತ ಪೈ

### ಖ್ಯಾತಿಯ ಹಿಮಾಲಯಕ್ಕೇರಿದ ಹಿಮಾ

ಹಿಮಾ ದಾಸ್ ಕುರಿತ ನರೇಂದ್ರ ಎಸ್. ಗಂಗೊಳ್ಳಿ ಅವರ ಲೇಖನ ಉತ್ತಮವಾಗಿತ್ತು. ಬರಿಗಾಲಲ್ಲಿ ಓಡಿ ಅಭ್ಯಾಸ ಮಾಡಿದ ಹಿಮಾ ಅವರ ಬದ್ಧತೆ ಮತ್ತು ಸಿದ್ಧತೆಗೆ ಸಿಕ್ಕ ಚಿನ್ನದ ಪದಕಗಳು ನಮ್ಮ ಹೆಣ್ಮಕ್ಕಳಿಗೆ ಸ್ಫೂರ್ತಿಯಾಗಲಿ. ಭಾರತಕ್ಕೆ ಹಿಮಾ ಇನ್ನಷ್ಟು ಪದಕಗಳನ್ನು ತರಲಿ.

—ಶಶಿಕುಮಾರ್ ಬಿ.ಎಸ್. ಸುಳ್ಯ,
ಬಿ, ಮನೋಹರ ಚಳ್ಳಕೆರೆ

### ಚಂದದ ಕತೆ ಮತ್ತು ಫೋಟೊ ಟಿಪ್ಸ್

ಆಗಸ್ಟ್ 22ರ ಸಂಚಿಕೆಯಲ್ಲಿ ಸಿ.ಎನ್. ಮುಕ್ತಾ ಅವರ ಸಣ್ಣ ಕಥೆ, 'ಸಹಪ್ರಯಾಣಿಕರು' ಚೆನ್ನಾಗಿದೆ. ಹಾಗೆಯೇ 'ವಿಶ್ವ ಛಾಯಾಗ್ರಹಣದ ದಿನ'ದ ಎರಡು ಲೇಖನಗಳು 'ಅಟೆನ್ಷನ್ ಪ್ಲೀಸ್' (ಡಿ.ಎಂ. ಘನಶ್ಯಾಂ), ಮತ್ತು 'ಕ್ಲಿಕ್ ಮಾಡುವ ಮುನ್ನ' (ಶಿವು ಕೆ.), ಛಾಯಾಗ್ರಹಣದ ಹಲವು ಉಪಯುಕ್ತ ಪಟ್ಟುಗಳನ್ನು ತಿಳಿಸಿಕೊಡುವ ಹಾಗಿದೆ.

—ಎಸ್.ಪ್ರಭಾ, ಬೆಂಗಳೂರು

### ಕಲೆಗಾರನ ಗೆರೆಯೊಳಗಿನ ಮನಸ್ಸು

ಆಗಸ್ಟ್ 8ರ ಸಂಚಿಕೆಯಲ್ಲಿನ ಸ್ನೇಹಜಯಾ ಕಾರಂತ ಅವರ 'ಗೆರೆಗಳೊಳಗೆ ಮನೆಯ ಮಾಡಿ' ಬರಹ ತುಂಬ ಚೆನ್ನಾಗಿ ಮೂಡಿ ಬಂದಿದೆ. ಹಣ್ಣು ಹಣ್ಣು ಮುದುಕರೊಬ್ಬರು ಐಸ್‌ಕ್ರೀಮ್ ಅಂಗಡಿಯ ಮುಂದೆ ನಿಂತು ಸಾಮಾನಿನ ಚೀಲವನ್ನು ಜೋಪಾನವಾಗಿ, ಕಾಲ ಮಧ್ಯದಲ್ಲಿ ಕಳ್ಳತನ ಆಗದಂತೆ ಇಟ್ಟಿರೋದು! ವಯಸ್ಸಿನ ಭಾರಕ್ಕೆ ದೇಹ ಬಾಗಿರೋದು, ತಲೆಯಲ್ಲೊಂದು ಕ್ಯಾಪ್ ಧರಿಸಿಕೊಂಡು ಕುರ್ಚಿಗಳು ಖಾಲಿ ಇದ್ದರೂ ಕುಳಿತುಕೊಳ್ಳದೆ, ನಿಂತುಕೊಂಡೇ ಏಕಾಗ್ರತೆಯಿಂದ, ಯಾವ ಕಡೆಗೂ ಗಮನಕೊಡದೆ, ಐಸ್‌ಕ್ರೀಮ್‌ನ್ನು ಗೆರೆಯೊಳಗೆ ಸೆರೆ ಹಿಡಿದ ಆ ಕಲೆಗಾರರಿಗೆ ಅಭಿನಂದನೆಗಳನ್ನು ಸಲ್ಲಿಸಲೇಬೇಕಲ್ಲವೇ?

—ಟಿ.ಎಂ. ಮಾನಪ್ಪ ಗೊಪಾಳ, ಶಿವಮೊಗ್ಗ

### ಮರೆಯಲಾಗದ ಸವಿಸವಿ ನೆನಪು

ಆಗಸ್ಟ್ 8ರ ಸಂಚಿಕೆಯಲ್ಲಿ 'ಸವಿ ಸವಿ ನೆನಪು' ಪುಟದಲ್ಲಿನ (ಜಯಲಕ್ಷ್ಮಿ ಜಿ ದೇಶಪಾಂಡೆ, ಹಳಿಯಾಳ) ಲೇಖನ ಓದಿ ಮನಸ್ಸು ಹಳೆಯ ನೆನಪನ್ನು ಮೆಲುಕಾಡಿತು. ಹೃದಯ ತುಂಬಿ ಬಂತು. ಲೇಖಕಿ ನಮ್ಮ ವನಿತಾ ಟೀಚರ್‌ಗೆ ನಮನಗಳು. ಅದರಲ್ಲಿ ದಶರಥನ ಪಾತ್ರಧಾರಿ ನಾನೇ.

—ಶಶಿಕಲಾ ಆರ್. ಸ್ವಾಮಿ, ಬೆಂಗಳೂರು

### ಇ ಪಾಸ್‌ಪೋರ್ಟ್

ಆಗಸ್ಟ್ 18ರ ಸಂಚಿಕೆಯಲ್ಲಿ ಸಿರಿ ಬರೆದಿರುವ 'ಇ ಪಾಸ್‌ಪೋರ್ಟ್ ರೆಕ್ಕೆ ಬಂತು' ಲೇಖನ ಚೆನ್ನಾಗಿದೆ. ಈ ತಂತ್ರಜ್ಞಾನ ಮಾಹಿತಿ ನಿಜಕ್ಕೂ ಉಪಯುಕ್ತ. ಹಲವಾರು ದೇಶ ಸುತ್ತಿದ ನಾನು ಇಮಿಗ್ರೇಷನ್ ಚೆಕ್ ಪಾಯಿಂಟ್‌ನಲ್ಲಿ ಬಹಳ ಸಮಯ ಕಾಯುತ್ತಲೇ ಕಳೆದಿದ್ದೇನೆ.

– ಶ್ರುತಿ ರಿಗ್ರೆಟ್ ಅಯ್ಯರ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in